॥ ಶ್ರೀ ಕೃಷ್ಣಾಯ ನಮಃ ॥

ಶ್ರೀಮನ್ಮಹಾಭಾರತತಾತ್ಪರ್ಯ ನಿರ್ಣಯದ

ಹದಿನಾರನೇ ಅಧ್ಯಾಯವು

ಕಾಲೇತ್ವೇತಸ್ಮಿನ್ಭೂಯ ಏವಾಖಿಲೈಶ್ಚನೃಪೈರ್ಯುಕ್ತೋಮಾಗಧೋಯೋದ್ಧುಕಾಮಃ ।
ಪ್ರಾಯಾದ್ಯದೂಂ ಸತ್ರನಿತ್ಯಾವ್ಯಯಾತಿಬಲೈಶ್ಚಯೋರ್ಽಪೀಚ್ಛಯಾಗಾತ್ಸಕೃಷ್ಣಃ ॥ ೧ ॥

ಏತಸ್ಮಿನ್ಕಾಲೇ=ರಾಜಕುಮಾರರಂ ಅಸ್ತ್ರ ವಿದ್ಯೆಯನ್ನು ಹೊಂದಿದ ಸಮಯದಲ್ಲಿ ಮಾಗಧಃ = ಜರಾಸಂಧನು ಭೂಯಂವಿವ=ಮತ್ತೂ ಕೂಡ ಯೋದ್ಧುಕಾಮಸ್ಸನ್=ಯುದ್ಧ ಮಾಡಲು ಇಚ್ಛೆಯುಳ್ಳವನಾಗಿ ಅಖಿಲೈಃ=ಎಲ್ಲಾ ನೃಪೈಃ = ರಾಜರಿಂದ ಯುಕ್ತಸ್ಸನ್ = ಕೂಡಿದವನಾಗಿ ಯದೂನ್=ಯಾದವರನ್ನು ಕುರಿತು ಪ್ರಾಯಾತ್ = ಹೋದನು. ತತ್ರ =, ಆ ಯುದ್ಧದಲ್ಲಿ ಸಕೃಷ್ಣಃ = ಆ ಕೃಷ್ಣನು ನಿತ್ಯಾವ್ಯಯಾತಿ ಬಲೈಶ್ವರ್ಯೋಽಪಿ = ನಾಶವಿಲ್ಲದ ಹ್ರಾಸರಹಿತವಾದ ಅತಿ ಸಾಮರ್ಥ್ಯರೂಪ ಐಶ್ವರ್ಯವುಳ್ಳವನಾದರೂ ಕೂಡ ಇಚ್ಛಯಾ = ತನ್ನ ಇಚ್ಛೆಯಿಂದಲೇ ಪ್ರಾಯಾತ್ = ಯಾದವರನ್ನು ಪಟ್ಟಣವನ್ನೂ ಬಿಟ್ಟು ಹೋದನು. ॥ ೧ ॥

ಅವಃ— ನಿತ್ಯವಾದ ಬಲೈಶ್ವರ್ಯವುಳ್ಳವನಾದರೆ ಕೃಷ್ಣನು ಏಕೆ ಹೋದನು ಎಂಬುದಕ್ಕೆ ಕಾರಣವನ್ನು ಹೇಳುತ್ತಾರೆ.

ಸಂದರ್ಶಯನ್ಬಲಿನಾಮಲ್ಪಸೇನಾದ್ಯುಪಸ್ಕರಾಣಾಂ ಬಹುಲೋಪಸ್ಕರೈಶ್ಚ ।
ಪ್ರಾಪ್ತೇವಿರೋಧೇಬಲಿಭಿರ್ನೀತಿ ಮಗ್ರ್ಯಂ ಯಯೌ ಸರಾಮೋ ದಕ್ಷಿಣಾಶಾಂ ರಮೇಶಃ ॥ ೨ ॥

ಅಲ್ಪಸೇನಾದ್ಯುಪಸ್ಕರಾಣಾಂ=ಅಲ್ಪ ಸಂಖ್ಯಾಕಗಳಾದ ಸೇನೆಯೇ ಮೊದಲಾದ ಯುದ್ಧ ಸಾಧನಗಳುಳ್ಳ ಬಲಿನಾಂ = ಬಲಿಷ್ಠರಿಗೆ ಬಹುಲೋಪಸ್ಕರೈಃ = ಬಹು ಸಂಖ್ಯಾಕಗಳಾದ ಸೇನೆ ಮೊದಲಾದ ಯುದ್ಧ ಸಾಧನಗಳುಳ್ಳ ಬಲಿಭಿಃ = ಬಲಿಷ್ಠರಿಂದ ವಿರೋಧೇ = ಜಗಳವು ಪ್ರಾಪ್ತೇಸತಿ = ಉಂಟಾಗುತ್ತಿರಲು ಅಗ್ರ್ಯಂ = ಶ್ರೇಷ್ಠವಾದ ನೀತಿಯನ್ನು ಸಂದರ್ಶಯಂನ್ = ತೋರಿಸತಕ್ಕ ರಮೇಶಃ = ಲಕ್ಷ್ಮೀಪತಿಯಾದ ಶ್ರೀಕೃಷ್ಣನು ಸರಾಮಸ್ಸನ್ = ಬಲರಾಮನಿಂದ ಕೂಡಿದವನಾಗಿ ದಕ್ಷಿಣಾಶಾಂ = ದಕ್ಷಿಣದಿಕ್ಕನ್ನು ಕುರಿತು ಯಯೌ = ಹೋದನು. ॥ ೨ ॥

ಅವಃ— ಅಶಕ್ತನಾದ್ದರಿಂದ ಶ್ರೀಕೃಷ್ಣನು ಓಡಿಹೋದನು ಎಂಬ ಗ್ರಂಥಾಂತರದ ವಿರೋಧವನ್ನು ಪರಿಹರಿಸುತ್ತಾ ಹಿಂದೆ ಹೇಳಿದ ಅರ್ಥವನ್ನೇ ಸ್ಪಷ್ಟಪಡಿಸುತ್ತಾರೆ.

ಸೋಽನಂತವೀರ್ಯಃ ಪರಮೋಽಭಯೋಽಪಿ ನೀತ್ಯೈಗಚ್ಛನ್ ಜಾಮದಗ್ನ್ಯಂ ದದರ್ಶ ।
ಕ್ರೀಡಾರ್ಥಮೇಕೋಽಪಿ ತತೋಽತಿದುರ್ಗಂ ಶ್ರುತ್ವಾ ಗೋಮಂತಂ ತಂತ್ರಯಯೌ ಸಹಾಗ್ರಜಃ ॥೩॥

ಅನಂತವೀರ್ಯಃ = ಅಪರಿಮಿತ ಸಾಮರ್ಥ್ಯವುಳ್ಳ ಪರಮಃ = ಸರ್ವೋತ್ತಮನಾದ ಸಃ = ಆ ಶ್ರೀಕೃಷ್ಣನು ಅಭಯೋಽಪಿ = ಭಯವಿಲ್ಲದವನಾದರೂ ಕೂಡ ನೀತ್ಯೈ = ಲೋಕಕ್ಕೆ ನೀತಿಯನ್ನು ತೋರಿಸಲಂ ಗಚ್ಛನ್ಸನ್ = ಹೋಗತಕ್ಕವನಾಗಿ ಜಾಮದಗ್ನ್ಯಂ = ಜಮದಗ್ನಿಗಳ ಪುತ್ರನಾದ ಪರಶುರಾಮನನ್ನು ದದರ್ಶ = ಕಂಡನು ಏಕೋಪಿ = ಶ್ರೀಕೃಷ್ಣನೂ ಪರಶುರಾಮನು ಒಬ್ಬನೇ ಆದರೂ ಕೂಡ ಕ್ರೀಡಾರ್ಥಂ = ಲೀಲೆಗೋಸ್ಕರ ಲೌಕಿಕದ ಅನುಕರಣಕ್ಕಾಗಿ ತತಃ= ಆ ಪರಶುರಾಮನಿಂದ ಅತಿದುರ್ಗಂ = ಅತ್ಯಂತ ಹೊಂದಲು ಅಶಕ್ಯವಾದ ಗೋಮಂತಂ = ಗೋಮಂತ ಎಂಬ ಪರ್ವತವನ್ನು ಶ್ರುತ್ವಾ = ಕೇಳಿ ತತ್ರ = ಅಲ್ಲಿಗೆ ಸಹಾಗ್ರಜಸ್ಸನ್=ಅಣ್ಣನಿಂದ ಕೂಡಿದವನಾಗಿ ಯಯೌ = ಹೋದನು. ॥ ೩ ॥

ತದಾದುಗ್ಧಾಚ್ಛಾ ಸಂಸೃತಿಸ್ಥೈಃ ಸುರಾದ್ಯೈಃ ಪೂಜಾಂ ಪ್ರಾಪ್ತುಂ ಸ್ಥಾನಮೇಷಾಂ ಚ ಯೋಗ್ಯಂ ।
ಮುಕ್ತಸ್ಥಾನಾದಾಪನಾರಾಯಣೋಽಜೋಬಲಿಶ್ಚಾಗಾತ್ತತ್ರ ಸಂದ್ರಷ್ಟುವಿಶಂ ॥ ೪ ॥

ತದಾ = ಗೋಮಂತ ಪರ್ವತಕ್ಕೆ ಹೋಗುವಾಗ ಅಜಃ = ಉತ್ಪತ್ತಿ ಇಲ್ಲದ ನಾರಾಯಣಃ = ನಾರಾಯಣನು ಸಂಸೃತಿಸ್ಥ = ಸಂಸಾರದಲ್ಲಿರುವ ಸುರಾದ್ಯೈಃ = ದೇವತೆಗಳು ಋಷಿಗಳೂ, ಬಲಿಯೇ ಮೊದಲಾದವರಿಂದ ಪೂಜಾಂ = ಸೇವೆಯನ್ನು ಪ್ರಾಪ್ತುಂ = ಹೊಂದಲಂ ಮುಕ್ತಸ್ಥಾನಾತ್ = ಕ್ಷೀರ ಸಮುದ್ರವಲ್ಲಿರುವ ಮುಕ್ತರಿರುವ ಸ್ಥಾನದಿಂದ ಏಷಾಂ = ಈ ಸಂಸಾರದಲ್ಲಿರುವವರಿಗೆ ಯೋಗ್ಯಂ = ಯೋಗ್ಯವಾದ ವಿಮುಕ್ತ ಸ್ಥಾನವನ್ನು ಆಪ = ಹೊಂದಿದವನು. ತತ್ರ = ಅಲ್ಲಿಗೆ ಈಶಂ = ಸ್ವಾಮಿಯಾದ ನಾರಾಯಣನನ್ನು ಸಂದ್ರಷ್ಟುಂ = ನೋಡಲಂ ಬಲಿಶ್ಚ = ಬಲಿಯೂ ಕೂಡ ಆಗಾತ್ = ಬಂದನು. ॥ ೪ ॥

ತತ್ರಾಸುರಾವೇಶಮಮುಷ್ಯವಿಷ್ಣುಃ ಸಂದರ್ಶಯನ್ನುಪ್ತಿಹೀನೋಽಪಿ ನಿತ್ಯಂ ।
ಸಂಸುಪ್ತವಚ್ಛಿಷ್ಯ ಉದಾರಕರ್ಮಾ ಸಂಜ್ಞಾಯೈದೇವಾನಾಂ ಮುಖವೀಕ್ಷ್ಯಾಪ್ರಮೇಯಃ ॥ ೫ ॥

ತತ್ರ = ಆಗ ಉದಾರಕರ್ಮಾ = ಉತ್ಕೃಷ್ಟವಾದ ವ್ಯಾಪಾರವುಳ್ಳ ಅಪ್ರಮೇಯಃ = ತಿಳಿಯಲಶಕ್ಯನಾದ ವಿಷ್ಣುಃ = ನಾರಾಯಣನೇ ಅಮುಷ್ಯ = ಈ ಬಲಿಗೆ ಆಸುರಾವೇಶಂ = ಆಸುರಾವೇಶವನ್ನು ಸಂದರ್ಶಯನ್ = ತೋರಿಸತಕ್ಕವನಾಗಿ ನಿತ್ಯಂ = ಯಾವಾಗಲೂ ಸುಪ್ತಿಹೀನೋಽಪಿ = ನಿದ್ರೆ ಇಲ್ಲದವನಾದರೂ ಕೂಡ ದೇವಾನಾಂ = ದೇವತೆಗಳಿಗೆ ಸಂಜ್ಞಾಯೈ = ನೀವೂ ಕೂಡ ನಿದ್ರೆಯನ್ನು ಮಾಡಿರಿ ಎಂಬ ಸೂಚನೆಗೋಸ್ಕರ ಮುಖಂ = ದೇವತೆಗಳ ಮುಖವನ್ನು ಈಕ್ಷ್ಯ = ನೋಡಿ ಸಂಸುಪ್ತವತ್ = ಜಿನ್ನಾಗಿ ನಿದ್ರಿಸಿದ ಪುರುಷನಂತೆ ಶಿಶ್ಯೇ = ಮಲಗಿದನು ॥ ೫ ॥

ದೇವಾಶ್ಚತದ್ಭಾವವಿದೋಽಖಿಲಾಶ್ಚ ನಿಮೀಲಿತಾಕ್ಷಾಃ ಶಯನೇಷು ಶಿಶ್ಯಿರೇ ।
ತದಾ ಬಲಿಸ್ತಸ್ಯ ವಿಷ್ಣೋಃ ಕಿರೀಟಮಾದಾಯಾಗಾಜ್ಜಹಸುಃ ಸರ್ವದೇವಾಃ ॥ ೬ ॥

ತದಾ = ಆಗ ತದ್ಭಾವವಿದಃ = ನಾರಾಯಣನ ಅಭಿಪ್ರಾಯವನ್ನು ತಿಳಿದಿರುವ ಅಖಿಲಾಃ = ಎಲ್ಲಾ ದೇವಾಶ್ಚ = ದೇವತೆಗಳೂ ಕೂಡ ನಿಮೀಲಿತಾಕ್ಷಾಃ = ಕಣ್ಣುಗಳನ್ನು ಮುಚ್ಚಿದವರಾಗಿ ಶಯನೇಷು = ಹಾಸಿಗೆಗಳಲ್ಲಿ ಶಿಶ್ಯಿರೇ = ಮಲಗಿದರು. ತದಾ = ಆಗ ಬಲಿಃ = ಬಲಿಚಕ್ರವರ್ತಿಯು ಕಿರೀಟಂ = ನಾರಾಯಣನ ಕಿರೀಟವನ್ನು ಆದಾಯ = ಹಿಡಿದುಕೊಂಡು ಅಗಾತ್ = ಪಾತಾಲಕ್ಕೆ ಹೋದನು. ಸರ್ವದೇವಾಃ = ಎಲ್ಲಾ ದೇವತೆಗಳೂ ಜಹಸುಃ = ನಕ್ಕರು. ॥ ೬ ॥

ನಾರಾಯಣೇ ಸರ್ವದೇವೈಃ ಸಮೇತೇ ಬ್ರಹ್ಮಾದಿಭಿರ್ಹಾಸಮಾನೇ ಸುಪರ್ಣಃ ।
ಗತ್ವಾಪಾತಾಲಂ ಯುಧಿಜಿತ್ವಾಬಲಿಂಚ ಕಿರೀಟಮಾದಾಯಾಭ್ಯಯಾದ್ಯತ್ರಕೃಷ್ಣಃ ॥ ೭ ॥

ಬ್ರಹ್ಮಾದಿಭಿಃ = ಬ್ರಹ್ಮನೇ ಮೊದಲಾಗಿ ಉಳ್ಳ ಸರ್ವದೇವೈಃ = ಎಲ್ಲಾ ದೇವತೆಗಳಿಂದ ಸಮೇತೇ = ಕೂಡಿದ ನಾರಾಯಣೇ = ನಾರಾಯಣನು ಹಾಸಮಾನೇಸತಿ = ನೆಗಾಡುತ್ತಿರಲು ಸುಪರ್ಣಃ = ಗರುಡನು ಪಾತಾಲಂ = ಪಾತಾಲ ಲೋಕವನ್ನು ಗತ್ವಾ = ಹೋಗಿ ಬಲಿಂ = ಬಲಿಯನ್ನು ಯುಧಿ = ಯುದ್ಧದಲ್ಲಿ ಜಿತ್ವಾ = ಗೆದ್ದು ಕಿರೀಟಂ = ಕಿರೀಟವನ್ನು ಆದಾಯ = ಹಿಡಿದುಕೊಂಡು ಯತ್ರಕೃಷ್ಣಃ = ಎಲ್ಲಿ ಕೃಷ್ಣನಿದ್ದನೋ ತತ್ರ = ಆ ಗೋಮಂತ ಪರ್ವತಕ್ಕೆ ಅಭ್ಯಯಾತ್ = ಬಂದನು. ॥ ೭ ॥

ತತ್ತಸ್ಯ ಶೀರ್ಷ್ಣಿಪ್ರತಿಮುಚ್ಯನತ್ವಾಖಿಗಃ ಸ್ತುತ್ವಾ ದೇವದೇವಂ ರಮೇಶಂ ।
ಸ್ಮೃತ ಆಗಚ್ಛೇತ್ಯೇವ ವಿಸರ್ಜಿತೋಽಮುನಾ ಯಯೌ ದುಗ್ಧಾಬ್ಧಿಂ ಯತ್ರ ನಾರಾಯಣೋಸೌ ॥ ೮ ॥

ಖಿಗಃ = ಗರುಡನು ತತ್ = ಆ ಕಿರೀಟವನ್ನು ತಸ್ಯ = ಆ ಶ್ರೀಕೃಷ್ಣನ ಶೀರ್ಷ್ಣಿ = ತಲೆಯಲ್ಲಿ ಪ್ರತಿಮುಚ್ಯ = ಇಟ್ಟು ದೇವದೇವಂ = ದೇವತೆಗಳಿಗೂ ದೇವನಾದ ರಮೇಶಂ = ಲಕ್ಷ್ಮೀಪತಿಯಾದ ಶ್ರೀಕೃಷ್ಣನನ್ನು ನತ್ವಾ = ನಮಸ್ಕರಿಸಿ ಸ್ತುತ್ವಾ = ಸ್ತೋತ್ರ ಮಾಡಿ ಅಮುನಾ = ಈ ಶ್ರೀಕೃಷ್ಣನಿಂದ ಸ್ಮೃತಏವ = ಸ್ಮರಿಸಲ್ಪಟ್ಟವನಾಗಿ ಆಗಚ್ಛ = ಬಾ ಇತಿ = ಎಂದು

ವಿಸರ್ಜತಸ್ಸನ್=ಕಳುಹಿಸಲ್ಪಟ್ಟವನಾಗಿ ಯತ್ರ=ಯಾವ ಕ್ಷೀರ ಸಮುದ್ರದಲ್ಲಿ ಅಸೌ=ಈ ಕೃಷ್ಣ ಸ್ವರೂಪನಾದ ನಾರಾಯಣಃ=ನಾರಾಯಣನು ಅಸ್ತಿ=ಇದ್ದಾನೋ ತಂದುಗ್ಧಾಬ್ಧಿಂ=ಆ ಕ್ಷೀರ ಸಮುದ್ರವನ್ನು ಕುರಿತು ಯಯೌ=ಹೋದನು. ॥ ೮ ॥

ಕಿರೀಟಂತತ್ಕೃಷ್ಣಮೂರ್ಧ್ನಿಪ್ರವಿಷ್ಟಂ ತತ್ತುಲ್ಯಮಾಸೀತ್ತಸ್ಯರೂಪೇಷ್ವಭೇದಾತ್ ।
ತದಿಚ್ಛಯಾ ಚೈವ ನಾರಾಯಣಸ್ಯ ಶೀರ್ಷ್ಣ್ಯಪ್ಯಾಸೀದ್ಯುಗಪದ್ದುಗ್ಧವಾರ್ಧೌ ॥ ೯ ॥

ಕೃಷ್ಣಮೂರ್ಧ್ನಿ=ಶ್ರೀಕೃಷ್ಣನ ಶಿರಸ್ಸಿನಲ್ಲಿ ಪ್ರವಿಷ್ಟಂ=ಇಡಲ್ಪಟ್ಟ ತತ್ಕಿರೀಟಂ=ಆ ನಾರಾಯಣನ ಕಿರೀಟವು ತಸ್ಯ=ಆ ನಾರಾಯಣನ ರೂಪೇಷು=ಮತ್ಸ್ಯಾದಿರೂಪಗಳಲ್ಲಿ ಅಭೇದಾತ್=ಐಕ್ಯವಿರುವುದರಿಂದ ತತ್ತುಲ್ಯಂ=ಕೃಷ್ಣನ ಶಿರಸ್ಸಿಗೆ ಸಮಾನವಾದದ್ದು ಆಸೀತ್=ಆಯಿತು. ತದಿಚ್ಛಯೈವ=ಆ ನಾರಾಯಣನ ಇಚ್ಛೆಯಿಂದಲೇ ಕೃಷ್ಣನ ಶಿರಸ್ಸಿನಲ್ಲಿಯೂ ದುಗ್ಧವಾರ್ಧೌ=ಕ್ಷೀರ ಸಮುದ್ರದಲ್ಲಿರುವ ನಾರಾಯಣಸ್ಯ=ನಾರಾಯಣನ ಶೀರ್ಷ್ಣ್ಯಪಿ=ಶಿರಸ್ಸಿನಲ್ಲಿಯೂ ಕೂಡ ಯುಗಪತ್=ಏಕಕಾಲದಲ್ಲಿಯೇ ಆಸೀತ್=ಇರತಕ್ಕದ್ದಾಯಿತು. ॥ ೯ ॥

ಪೂರ್ವಂಪ್ರಾಪ್ತಾನ್ಯೇವ ದಿವ್ಯಾಯುಧಾನಿ ಪುನರ್ವೈಕುಂಠಂಲೋಕಮಿತಾನಿಭೂಯಃ ।
ತದಾಽತೇರೂರೌಹಿಣೇ ಯಸ್ಯ ಚೈವಂ ಭಾರ್ಯಾಪ್ಯಾಗಾದ್ವಾರುಣೇ ನಾಮಪೂರ್ವಾ ॥ ೧೦ ॥

ಪೂರ್ವಂ=ಹಿಂದೆ ಜರಾಸಂಧನಿಂದ ಯುದ್ಧಕಾಲದಲ್ಲಿ ಪ್ರಾಪ್ತಾನಿ=ಬಂದಿರುವ ದಿವ್ಯಾಯುಧಾನಿ=ಶ್ರೇಷ್ಠ ಆಯುಧಗಳು ಪುನಃ=ಯುದ್ಧ ಮುಗಿದ ನಂತರ ವೈಕುಂಠಂ ಲೋಕಂ=ವೈಕುಂಠ ಲೋಕವನ್ನು ಇತಾನಿ=ಹೋದವು. ತದಾ=ಶ್ರೀಕೃಷ್ಣನು ಗೋಮಂತ ಪರ್ವತದಲ್ಲಿರುವ ಸಮಯದಲ್ಲಿ ಭೂಯಃ=ಮತ್ತೊಮ್ಮೆ ಅಭಿತೇರುಃ=ಕೃಷ್ಣನ ಹತ್ತಿರ ಬಂದವು. ಏವಂ=ಹೀಗೆಯೇ ರೌಹಿಣೇಯಸ್ಯ=ಬಲರಾಮನ ಆಯುಧಾನ್ಯಪಿ = ಆಯುಧಗಳೂ ಕೂಡ ಅಭಿತೇರುಃ = ಬಂದವು. ಪೂರ್ವಾ = ಬಲರಾಮನ ಮೂಲರೂಪದವಳಾದ ವಾರುಣೀ=ವಾರುಣಿಯೆಂದು ನಾಮ=ಪ್ರಸಿದ್ಧಳಾದ ಭಾರ್ಯಾಪಿ= ಹೆಂಡತಿಯೂ ಕೂಡ ಆಗಾತ್=ಬಂದಳು. ॥ ೧೦ ॥

ಸೈವಾಪರಂರೂಪಮಾಸ್ಥಾಯ ಚಾಗಾಚ್ಛ್ರೀರಿತ್ಯಾಖ್ಯಂ ಸೇಂದಿರಾವೇಶಮಗ್ರ್ಯಂ ।
ಕಾಂತಿಶ್ಚಾಗಾತ್ತಸ್ಯ ಸೋಮಸ್ಯ ಚಾನ್ಯಾಭಾರ್ಯಾದ್ವಯೋಃ ಪೂರ್ವತನಾಸುರೂಪಾ ॥ ೧೧ ॥

ಸೈವ=ಆ ವಾರುಣಿಯೇ ಶ್ರೀರಿತ್ಯಾಖ್ಯಂ=ಶ್ರೀಃ ಎಂದು ಹೆಸರುಳ್ಳ ಸೇಂದಿರಾವೇಶಂ=ಲಕ್ಷ್ಮಿಯು ಆವೇಶದಿಂದ ಕೂಡಿದ ಅಗ್ರ್ಯಂ=ಶ್ರೇಷ್ಠವಾದ ಅಪರಂರೂಪಂ=ಇನ್ನೊಂದು ರೂಪವನ್ನು ಆಸ್ಥಾಯ=ಹೊಂದಿ ಆಗಾತ್=ಬಂದಳು ತಸ್ಯ=ಆ ಬಲರಾಮನ ಕಾಂತಿಶ್ಚ=ಕಾಂತಿ ನಾಮಕಳಾದ ಹೆಂಡತಿಯೂ ಕೂಡ ಆಗಾತ್=ನಾಗಲೋಕದಿಂದ ಬಂದಳು. ಸೋಮಸ್ಯ=ಚಂದ್ರನ ಭಾರ್ಯಾ=ಹೆಂಡತಿಯಾದ ಕಾಂತಿಃ = ಕಾಂತಿಯು ಅನ್ಯಾ = ಬಲರಾಮನ ಹೆಂಡತಿಯಾದ ಕಾಂತಿಗಿಂತ ಭಿನ್ನಳು. ದ್ವಯೋಃ=ಇಬ್ಬರು ಕಾಂತಿಯರ ಮಧ್ಯದಲ್ಲಿ ಪೂರ್ವತನಾ=ಮೊದಲಿನವಳಾದ ಬಲರಾಮನ ಹೆಂಡತಿಯಾದ ಕಾಂತಿಯು ಸುರೂಪಾ=ಅತಿ ಸುಂದರ ರೂಪವುಳ್ಳವಳು. ॥ ೧೧ ॥

ತಾಭೀರಾಮೋಮುಮುದೇ ತತ್ರ ತಿಷ್ಠನ್ ಶಶಾಂಕ ಪೂಗೋದ್ರಿಕ್ತಕಾಂತಿಃ ಸುಧಾಮಾ ।
ತಸ್ಯಾವಾರುಣ್ಯಾಃ ಪ್ರತಿಮಾಪೇಯರೂಪಾಕಾದಂಬರೀವಾರುಣೀತಾಂಪಪೌ ಸಃ ॥ ೧೨ ॥

ಶಶಾಂಕ ಪೂಗೋದ್ರಿಕ್ತಕಾಂತಿಃ=ಚಂದ್ರರ ಸಮೂಹದಿಂದ ಉತ್ಕೃಷ್ಟವಾದ ಕಾಂತಿಯುಳ್ಳ ಸುಧಾಮಾ = ಶೋಭನ ತೇಜಸ್ಸುಳ್ಳ ರಾಮಃ=ಬಲರಾಮನು ತತ್ರ = ಆ ಗೋಮಂತ ಪರ್ವತದಲ್ಲಿ ತಿಷ್ಠನ್ಸನ್=ಇರತಕ್ಕವನಾಗಿ ತಾಭಿಃ=ವಾರುಣೀ ಶ್ರೀ ಕಾಂತಿಯೆಂಬ ಮೂರು ಸ್ತ್ರೀಯರಿಂದ ಮುಮುದೇ=ಸಂತೋಷಗೊಂಡನು. ತಸ್ಯಾ=ವಾರುಣ್ಯಾಃ=ಪೂರ್ವೋಕ್ತಳಾದ ವಾರುಣಿಯ ಪ್ರತಿಮಾ=ಅಭಿಮಾನ್ಯಮಾನವಾದ್ದರಿಂದ ದೇಹಕ್ಕೆ ಸಮಾನವಾದ ಕಾದಂಬರೀ=ಕದಂಬ ಕುಸುಮದಿಂದ ಹುಟ್ಟಿರುವ ಕಾದಂಬರೀ ನಾಮಕ ಮದ್ಯವು ಪೇಯರೂಪಾ=ಪಾನ ಮಾಡಲು ಯೋಗ್ಯವಾದ ಸ್ವರೂಪವುಳ್ಳ ವಾರುಣೀ= ವಾರುಣಿಯನ್ನು ತಾಂ=ಆ ವಾರುಣಿ ನಾಮಕ ಮದ್ಯವನ್ನು ಸಃ= ಆ ಬಲರಾಮನು ಪಪೌ = ಪಾನ ಮಾಡಿದನು. (ಆ ಮದ್ಯವು ಗೋಮಂತ ಶಿಖರದಲ್ಲಿರತಕ್ಕ ಕದಂಬ ವೃಕ್ಷದ ಕೋಟರದಿಂದ ಸುರಿಯಿತು.)

ಏವಂತಯೋಃ ಕ್ರೀಡತೋಃ ಸ್ವೈರಮತ್ರರಾಜನ್ಯವೃಂದಾನುಗತೋಜರಾಸುತಃ ।
ಗಿರಿಂ ಗೋವಂತಂ ಪರಿವಾರ್ಯಾದಹತ್ತಂ ದೃಷ್ಟ್ವಾದೇವೌ ಪುಪ್ಲುವತುರ್ಬಲಾಢ್ಯೌ ॥ ೧೩ ॥

ಏವಂ=ಹಿಂದೆ ಹೇಳಿದ ರೀತಿಯಿಂದ ಅತ್ರ=ಈ ಪರ್ವತದಲ್ಲಿ ತಯೋಃ=ಆ ರಾಮಕೃಷ್ಣರು ಸ್ವೈರಂ=ಇಚ್ಛಾನುಸಾರವಾಗಿ ಕ್ರೀಡತೋಃಸತೋಃ=ಕ್ರೀಡಿಸುತ್ತಿರಲು ರಾಜನ್ಯವೃಂದಾನುಗತಃ=ರಾಜರ ಸಮೂಹದಿಂದ ಕೂಡಿದ ಜರಾಸುತಃ=ಜರಾಸಂಧನು ಗೋವಂತಂಗಿರಿಂ=ಗೋವಂತ ಪರ್ವತವನ್ನು ಪರಿವಾರ್ಯ = ಆವರಿಸಿ ಪದಹತ್ =ಸುಟ್ಟನು. ತಂ=ಸುಡತಕ್ಕ ಪರ್ವತವನ್ನು ದೃಷ್ಟ್ವಾ = ನೋಡಿ ಬಲಾಢ್ಯೌ=ಬಲಸಂಪನ್ನರಾದ ದೇವೌ = ಕೃಷ್ಣರಾಮರು ಪುಪ್ಲುವತುಃ=ಹಾರಿದರು. ॥೧೩॥

ಗಿರಿಸ್ತಾಭ್ಯಾಂ ಪೀಡಿತಸ್ಸನ್ನಿಮಗ್ನೋಭೂಮೌಪದ್ಭ್ಯಾಂ ಯೋಜನೈಕಾದಶಂ ಸಃ ।
ನಿಷ್ಪೀಡಿತಾಜ್ಜಲ ಧಾರೋದ್ಗತಾಸಾದ್ವಹ್ನಿಂವ್ಯಾಪ್ತಂ ಶಮಯಾಮಾಸಸರ್ವಂ ॥ ೧೪ ॥

ತಾಭ್ಯಾಂ=ಆ ಕೃಷ್ಣರಾಮರಿಂದ ಪದಾ್ಭ್ಯಂ=ಕಾಲುಗಳಿಂದ ಸಗಿರಿಃ=ಆ ಪರ್ವತವು ಪೀಡಿತಸ್ಸನ್=ಪೀಡಿಸಲ್ಪಟ್ಟದ್ದಾಗಿ ಭೂಮೌ=ಭೂತಲದಲ್ಲಿ ಯೋಜನೈಕಾದಶಂ=ಹನ್ನೊಂದು ಯೋಜನಪರ್ಯಂತ ನಿಮಗ್ನಃ=ಮುಳುಗಿತು. ನಿಷ್ಪೀಡಿತಾತ್=ಚೆನ್ನಾಗಿ ಪೀಡಿಸಿಕೊಳ್ಳಲ್ಪಟ್ಟ ಅಸ್ಮಾತ್=ಈ ಪರ್ವತದಿಂದ ಉದ್ಗತಾ=ಮೇಲಕ್ಕೆ ಬಂದಿರುವ ಜಲಧಾರಾ=ನೀರಿನ ಧಾರೆಯು ವ್ಯಾಪ್ತಂ=ವ್ಯಾಪಿಸಲ್ಪಟ್ಟ ಸರ್ವಂ=ಎಲ್ಲಾ ವಹ್ನಿಂ=ಬೆಂಕಿಯನ್ನು ಶಮಯಾಮಾಸ=ಆರಿಸಿತು. ॥ ೧೪ ॥

ಸೇನಾಂ ಪ್ರವಿಷ್ಟೌ ಸರ್ವರಾಜನ್ಯವೃಂದಂ ವ್ಯಮಥ್ನತಾಂ ದೇವವರೌಸ್ವಶಸ್ತ್ರೈಃ ।
ತತ್ರೈವ ಹಂಸೋಡಿಭಿಕಶ್ಚೈಕಲವ್ಯಃ ಸಕೀಚಕಸ್ತೌಶಿಶುಪಾಲ ಪೌಂಡ್ರಕೌ ॥ ೧೫ ॥
ಭೌಮಾತ್ಮ ಜೋದಂತವಕ್ರಶ್ಚರುಗ್ಮೀ ಸೌಭಾಧಿ ಪೋ ಮೈಂದಮೈಂದಾನುಜೌಚ ।
ಅನ್ಯೇಚ ಯೇ ಪಾರ್ಥಿವಾಃ ಸರ್ವಏವ ಕ್ರೋಧಾತ್ಕೃಷ್ಣಂ ಪರಿವಾಯಾರ್ಜಭ್ಯವರ್ಷನ್ ॥ ೧೬ ॥

ಶಸ್ತ್ರೈರಸ್ತ್ರೈರ್ದ್ರುಮಪೂಗೈಃ ಶಿಲಾಭಿರ್ಭಕ್ತಾಶ್ಚಯೇ ಶಲ್ಯಬಾಹ್ಲೀಕ ಮುಖ್ಯಾಃ
ಸಸೋಮದತ್ತಿಃ ಸೌಮದತ್ತಿರ್ವಿರಾಟಃ ಪಾಂಚಾಲರಾಜಶ್ಚ ಜರಾಸುತಸ್ಯ ।
ಭೂಯಾತ್ಕೃಷ್ಣಂ ಶರವರ್ಷೈರವರ್ಷನ್ಕಾರಾಗೃಹೇ ವಾಸಿತಾ ಮಾಗಧೇನ ॥ ೧೭ ॥

ಸೇನಾಂ=ಜರಾಸಂಧನ ಸೇನೆಯನ್ನು ಪ್ರವಿಷ್ಟೌ=ಪ್ರವೇಶ ಮಾಡಿದ ದೇವವರೌ=ದೇವಶ್ರೇಷ್ಠರಾದ ರಾಮಕೃಷ್ಣರು ಸ್ವಶಸ್ತ್ರೈಃ=ತಮ್ಮ ಶಸ್ತ್ರಗಳಿಂದ ಸರ್ವರಾಜನ್ಯವೃಂದಂ=ಎಲ್ಲಾ ರಾಜರ ಸಮೂಹವನ್ನು ವ್ಯಮಥ್ನತಾಂ=ಮಥನ ಮಾಡಿದರು. ತತ್ರೈವ=ಆಗಲೇ ಹಂಸಃ=ಹಂಸನು ಡಿಭಿಕಶ್ಚ=ಡಿಭಿಕನೂ ಕೂಡ ಸಕೀಚಕಃ=ಕೀಚಕನಿಂದ ಕೂಡಿದ ಏಕಲವ್ಯಃ=ಏಕಲವ್ಯನು ತೌಶಿಶುಪಾಲಪೌಂಡ್ರಕೌ=ಆ ಶಿಶುಪಾಲ ಮತ್ತು ಪೌಂಡ್ರಕ ವಾಸುದೇವನು ಭೌಮಾತ್ಮಜಃ=ನರಕಾಸುರನ ಮಗನಾದ ಭಗದತ್ತನು ದಂತವಕ್ರಶ್ಚ=ದಂತವಕ್ರನು ರುಗ್ಮೀ=ರುಗ್ಮಿಯು ಸೌಭಾಧಿಪ=ಸೌಭದೇಶಕ್ಕೆ ಅಧಿಪತಿಯಾದ ಸಾಲ್ವನು ಮೈಂದ ಮೈಂದಾನು ಜೌಚ=ಮೈಂದ ಮತ್ತು ಮೈಂದನ ತಮ್ಮನಾದ ವಿವಿದನು ಅನ್ಯೇ=ಇತರರಾದ ಯೇ=ಯಾವ ಪಾರ್ಥಿವಾಃ=ರಾಜರೋ ತೇಸರ್ವಏವ=ಅವರೆಲ್ಲರೂ ಕ್ರೋಧಾತ್ = ಕೋಪದಿಂದ ಕೃಷ್ಣಂ=ಶ್ರೀಕೃಷ್ಣನನ್ನು ಪರಿವಾರ್ಯ=ಸುತ್ತುವರಿಸಿ ಶಸ್ತ್ರೈಃ=ಶಸ್ತ್ರಗಳಿಂದ ಅಸ್ತ್ರೈಃ=ಅಸ್ತ್ರಗಳಿಂದ ದ್ರುಮಪೂಗೈಃ= ವೃಕ್ಷಗಳ ಸಮೂಹಗಳಿಂದ ಶಿಲಾಭಿಃ=ಕಲ್ಲುಗಳಿಂದ ಅಭವರ್ಷನ್ =ಮಳೆಗರಿಸಿದರು. ಯೇ= ಯಾವ ಭಕ್ತಾಃ= ಕೃಷ್ಣನಲ್ಲಿ ಭಕ್ತರಾದ ಸಸೋಮದತ್ತಾಃ= ಸೋಮದತ್ತನಿಂದ ಕೂಡಿದ ಶಲ್ಯಬಾಹ್ಲೀಕಮುಖ್ಯಾಃ = ಶಲ್ಯ, ಬಾಹ್ಲೀಕರು ಪ್ರಧಾನರಾಗಿ ಉಳ್ಳವರೋ ಸೌಮದತ್ತಿಃ = ಸೋಮದತ್ತನ ಮಗನಾದ ಭೂರಿಶ್ರವನು ವಿರಾಟಃ = ವಿರಾಟನು ಪಾಂಚಾಲರಾಜಶ್ಚ = ದ್ರುಪದನೂ ಕೂಡ ತೇ = ಅವರೆಲ್ಲರೂ ಜರಾಸುತಸ್ಯ = ಜರಾಸಂಧನ ಭಯಾತ್ = ಹೆದರಿಕೆಯಿಂದ ಕೃಷ್ಣಂ = ಶ್ರೀಕೃಷ್ಣನನ್ನು ಶರವರ್ಷೈಃ = ಬಾಣಗಳ ವರ್ಷಣಗಳಿಂದ ಅವರ್ಷನ್ = ಸುರಿಸಿದರು. ಮಾಗಧೇನ = ಜರಾಸಂಧನಿಂದ ಕಾರಾಗೃಹೇ = ಜೈಲಿನಲ್ಲಿ ವಾಸಿತಾಃ = ವಾಸಮಾಡಿಸಿಕೊಳ್ಳಲ್ಪಟ್ಟ ಯೇ = ಯಾವ ನೃಪಾಃ = ರಾಜರೋ ತೇಪಿ = ಅವರೂ ಕೂಡ ಶರವರ್ಷೈಃ = ಬಾಣಗಳ ಮಳೆಗಳಿಂದ ಕೃಷ್ಣಂ = ಶ್ರೀಕೃಷ್ಣನನ್ನು ಅವರ್ಷನ್ = ಸುರಿಸಿದರು. ॥ ೧೭ ॥

ಸರ್ವಾನೇತಾನ್ ಶರವರ್ಷೇಣಕೃಷ್ಣೋ. ವಿಸೂತವಾಜಿಧ್ವಜಶಸ್ತ್ರವರ್ಮಣಃ ।
ಕೃತ್ವೈವಮನ್ ರೋಣಿತಾನಾರ್ತರೂಪಾನ್ವಿದ್ರಾವಯಾಮಾಸ ಹರಿರ್ಯಥಾ ಮೃಗಾನ್ ॥ ೧೮ ॥

ಕೃಷ್ಣಃ=ಶ್ರೀಕೃಷ್ಣನು ವಿತಾನ್ಸರ್ವಾನ್=ಇವರೆಲ್ಲರನ್ನೂ ಶರವರ್ಷೇಣ=ಬಾಣಗಳ ಮಳೆಯಿಂದ ವಿಸೂತವಾಜಿ ಧ್ವಜಶಸ್ತ್ರವರ್ಮಣಃ = ಹೋಗಲ್ಪಟ್ಟ ಸ್ಯಂದನ, ಕುದುರೆಗಳು, ಧ್ವಜಗಳು, ಶಸ್ತ್ರಗಳು, ಕವಚಗಳು ಇವುಗಳುಳ್ಳವರನ್ನಾಗಿಯೂ ಏವಮ್ ರೋಣಿತಾನ್=ವಾಂತಿ ಮಾಡುವ ರಕ್ತವುಳ್ಳವರನ್ನಾಗಿಯೂ ಆರ್ತರೂಪಾನ್=ದುಃಖಿಸ್ವರೂಪವುಳ್ಳವರನ್ನಾಗಿಯೂ ಕೃತ್ವಾ=ಮಾಡಿ ಹರಿಃ=ಸಿಂಹವು ಮೃಗಾನ್ ಯಥಾ=ವಿದ್ರಾವಯತಿ ಮೃಗಗಳನ್ನು ಹೇಗೆ ಓಡಿಸುತ್ತದೋ ತಥಾ=ಹಾಗೆ ವಿದ್ರಾವಯಾಮಾಸ=ಓಡಿಸಿದನು. ॥ ೧೮ ॥

ಹತ್ವಾ ಸೇನಾಂ ವಿಂಶದಕ್ಷೌಹಿಣೀಂತಾಂ ತ್ರಿಭಿರ್ಯುಕ್ತಾಂ ರುಗ್ಮಿಣಂ ನೈವಕೃಷ್ಣಃ ।
ರುಗ್ಮಿಣ್ಯರ್ಥೇ ಪೀಡಯಾ ಮಾಸ ಶಸ್ತ್ರಾಣ್ಯಸ್ಯ ಛಿತ್ವಾ ವಿರಥಂ ದ್ರಾವಯಾನಃ ॥ ೧೯ ॥

ಕೃಷ್ಣಃ=ಶ್ರೀಕೃಷ್ಣನಂ ತ್ರಿಭಿಃ=ಮೂರು ಅಕ್ಷೌಹಿಣೀಸಂಖ್ಯಾ ವಿಶೇಷಗಳಿಂದ ಯುಂಕ್ತಾಂ=ಕೂಡಿದ ವಿಂಶದಕ್ಷೌಹಿಣೀಂ = ಇಪ್ಪತ್ತು ಅಕ್ಷೌಹಿಣೀ ಸಂಖ್ಯಾಕವಾದ ತಾಂ ಸೇನಾಂ=ಆ ಜರಾಸಂಧನ ಸೈನ್ಯವನ್ನು ಹತ್ವಾ=ಕೊಂದಂ ಅಸ್ಯ = ಈ ರುಗ್ಮಿಯ ಶಸ್ತ್ರಾಣಿ=ಶಸ್ತ್ರಗಳನ್ನು ಛಿತ್ವಾ=ತುಂಡರಿಸಿ ವಿರಥಂ=ರಥರಹಿತನನ್ನಾಗಿ ಕೃತ್ವಾ=ಮಾಡಿ ದ್ರಾವಯಾನಃಸನ್=ಓಡಿಸುವವನಾಗಿ ರುಗ್ಮಿಣ್ಯರ್ಥೇ = ರುಗ್ಮಿಣಿಗೋಸ್ಕರ ನೈವಪೀಡಯಾಮಾಸ=ಪೀಡಿಸಲೇ ಇಲ್ಲ. ॥ ೧೯ ॥

ಜರಾಸುತೋರೌಹಿಣೇಯೇನ ಯುದ್ಧಂ ಚಿರಂ ಕೃತ್ವಾತನ್ಮುಸಲೇನಪೋಥಿತಃ ।
ವಿಮೋಹಿತಃ ಪ್ರಾಪ್ತಸಂಜ್ಞಶ್ಚಿರೇಣ ಕ್ರುದ್ಧೋಗದಾಂತದುರಸ್ಯಭ್ಯಪಾತಯತ್ ॥ ೨೦ ॥

ಜರಾಸುತಃ=ಜರಾಸಂಧನು ರೌಹಿಣೇಯೇಣ=ಬಲರಾಮನಿಂದ ಚಿರಂ=ಬಹು ಕಾಲದಲ್ಲಿ ಯುದ್ಧಂ=ಯುದ್ಧವನ್ನು ಕೃತ್ವಾ = ಮಾಡಿ ತನ್ಮುಸಲೇನ=ಬಲರಾಮನ ಒನಕೆಯಿಂದ ಪೋಥಿತಃಸನ್=ಹೊಡೆಯಲ್ಪಟ್ಟವನಾಗಿ ವಿಮೋಹಿತಃ=ಮೂರ್ಛಿತನಾದನು. ಚಿರೇಣ=ಬಹು ಕಾಲದ ನಂತರ ಪ್ರಾಪ್ತಸಂಜ್ಞಕಿಸನ್=ಹೊಂದಲ್ಪಟ್ಟ ಎಚ್ಚರಿಕೆಯುಳ್ಳವನಾಗಿ ಕ್ರುದ್ಧಿಸನ್=ಕುಪಿತನಾಗಿ ತದುರಸಿ=ಬಲರಾಮನ ಎದೆಯಲ್ಲಿ ಗದಾಂ=ಗದೆಯನ್ನು ಅಭ್ಯಪಾತಯತ್=ಹಾಕಿದನು. ॥ ೨೦ ॥

ತೇನಾಹತಃ ಸುಭೃಶಂ ರೌಹಿಣೇಯಃ ಪಪಾತ ಮೂರ್ಛಾಭಿಗತಃ ಕ್ಷಣೇನ ।
ಅಜೇಯತ್ವಂ ತಸ್ಯ ದತ್ತಂ ಹಿ ಧಾತ್ರಾ ಪೂರ್ವಂ ಗೃಹೀತೋವಿಷ್ಣುನಾರಾಮಗೇನ ॥ ೨೧ ॥

ತೇನ=ಆ ಜರಾಸಂಧನಿಂದ ಸುಭೃಶಂ=ಚೆನ್ನಾಗಿ ಆಹತಃ=ಹೊಡೆಯಲ್ಪ ರೌಹಿಣೇಯಃ=ಬಲರಾಮನು ಕ್ಷಣೇನ= ಕೂಡಲೇ ಮೂರ್ಛಾಭಿಗತಸ್ಸನ್ = ಮೂರ್ಛೆಯನ್ನು ಹೊಂದಿದವನಾಗಿ ಪಪಾತ = ಬಿದ್ದನು. ಮಧುರೆಯಲ್ಲಿ ಜರಾಸಂಧನನ್ನು ಜಯಿಸಿ ಈಗ ಪರಾಜಯ ಬಸಲು ಕಾರಣವನ್ನು ಹೇಳುತ್ತಾರೆ. ತಸ್ಯ = ಆ ಜರಾಸಂಧನಿಗೆ ಧಾತ್ರಾ = ಬ್ರಹ್ಮನಿಂದ ಅಜೇಯತ್ವಂ = ಯಾರಿಂದಲೂ ಪರಾಜಯ ರಾಹಿತ್ಯವು ದತ್ತಂ ಹಿ = ಕೊಡಲ್ಪಟ್ಟಿದೆಯಷ್ಟೆ. ಪೂರ್ವಂ = ಮಧುರೆಯಲ್ಲಿ ನಡೆದ ಪ್ರಥಮ ಯುದ್ಧದಲ್ಲಿ ರಾಮಗೇಣ = ಬಲರಾಮನಲ್ಲಿ ಸನ್ನಿಹಿತನಾದ ವಿಷ್ಣುನಾ = ಶಂಖಚಕ್ರಕೇಶ ಸ್ವರೂಪನಾದ ವಿಷ್ಣುವಿನಿಂದಲೇ ಗೃಹೀತಃ = ಹಿಡಿಯಲ್ಪಟ್ಟನು. ॥ ೨೧ ॥

ತಥಾಕೃತೇ ಬಲಭದ್ರೇತು ಕೃಷ್ಣೋಗದಾಮಾದಾಯ ಸ್ವಾಮುಗಾನ್ಮಾಗಧೇಶಂ ।
ತತಾಡಜತ್ರೌ ಸತಯಾಭಿತಾಡಿತೋ ಜಗಾಮುಗಾಂ ಮೂರ್ಛಯಾ ಭಿಪ್ಲುತಾಂಗಃ ॥ ೨೨ ॥

ಬಲಭದ್ರೇ = ಬಲರಾಮನು ತಥಾಕೃತೇಸತಿ = ಮೂರ್ಛಿತನಾಗಿ ಮಾಡಲ್ಪಡುತ್ತಿರಲು ಕೃಷ್ಣಃ = ಶ್ರೀಕೃಷ್ಣನು ಸ್ವಾಂಗದಾಂ = ತನ್ನ ಗದೆಯನ್ನು ಆದಾಯ = ಹಿಡಿದುಕೊಂಡು ಮಾಗಧೇಶಂ = ಜರಾಸಂಧನನ್ನು ಅಗಾತ್ = ಹೊಂದಿದನು. ಜತ್ರೌ = ಕಂಠಪ್ರದೇಶ, ಎದೆ ಇವುಗಳ ಮಧ್ಯದಲ್ಲಿರುವ ಎಲುಬಿನಲ್ಲಿ ತತಾಡ = ಹೊಡೆದನು. ತಯಾ = ಆ ಗದೆ

ಯಿಂದ ಅಭಿತಾಡಿತಃ = ಚೆನ್ನಾಗಿ ಹೊಡೆಯಲ್ಪಟ್ಟ ಸಃ ಆ ಜರಾಸಂಧನಂ ಅಭಿಪ್ಲುತಾಂಗಃಸನ್ = ರಕ್ತದಿಂದ ಒದ್ದೆಯಾದ ಅವಯವ ಉಳ್ಳವನಾಗಿ ಮೂರ್ಧ್ನಯಾ = ಮೂರ್ಧೆಯಿಂದ ಗಾಂ = ಭೂಮಿಯನ್ನು ಜಗಾಮ = ಹೊಂದಿದನಂ. ಭೂಮಿಯಲ್ಲಿ ಬಿದ್ದನು. ॥ ೨೨ ॥

ಅಥೋತ್ತಸ್ಥೌ ರೋಹಿಣೇಯಃ ಸಹೈವ ಸಮುತ್ತಸ್ಥೌ ಮಾಗಧೋಪ್ಯಗ್ರ್ಯವೀರ್ಯಃ ।
ಕ್ರುದ್ಧೋ ಗೃಹೀತ್ವಾ ಮೌಲಿಮಸ್ಯಾಶುರಾಮೋ ವಧಾಯೋದ್ಯಚ್ಛನ್ಮುಸಲಂ ಬಾಹುಶಾಲೀ ॥ ೨೩ ॥

ಅಥ = ಅನಂತರ ರೌಹಿಣೇಯಃ = ಬಲರಾಮನು ಉತ್ತಸ್ಥೌ = ಎದ್ದನು. ಅಗ್ರ್ಯವೀರ್ಯಃ = ಶ್ರೇಷ್ಠ ಪರಾಕ್ರಮ ಉಳ್ಳ ಮಾಗಧೋಽಪಿ=ಜರಾಸಂಧನೂ ಕೂಡ ಸಹೈವ=ಬಲರಾಮನಿಂದ ಕೂಡಿಕೊಂಡೇ ಸಮುತ್ತಸ್ಥೌ=ಎದ್ದನಂ. ಬಾಹುಶಾಲೀ=ಭುಜಗಳಿಂದ ಶೋಭಿಸುವ ರಾಮಃ = ಬಲರಾಮನು ಕ್ರುದ್ಧಃ ಸನ್=ಕೋಪಿತನಾಗಿ ಅಸ್ಯ=ಈ ಜರಾಸಂಧನ ಮೌಲಿಂ=ಕೇಶ ಗ್ರಂಥಿಯನ್ನು ಗೃಹೀತ್ವಾ=ಹಿಡಿದುಕೊಂಡು ವಧಾಯ=ಕೊಲ್ಲುವುದಕ್ಕೋಸ್ಕರ ಆಶು=ಕೂಡಲೇ ಮುಸಲಂ=ಒನಕೆಯನ್ನು ಉದ್ಯಚ್ಛತ್=ಉದ್ಯುಕ್ತವನ್ನಾಗಿ ಮಾಡಿದನು. ॥ ೨೩ ॥

ಅಥಾಬ್ರವೀದ್ವಾಯುರೇನಂ ನರಾಮು ತ್ವಯಾಹಂತುಂ ಶಕ್ಯತೇ ಮಾಗಧೋಽಯುಂ ।
ವೃಥಾನತೇ ಬಾಹುಬಲಂ ಪ್ರಯೋಜ್ಯಮುಮೋಘಂತೇ ಯದ್ಬಲಂತದ್ವದಸ್ತ್ರಂ ॥ ೨೪ ॥

ಅಥ=ಅನಂತರ ವಾಯುಃ=ಪ್ರಾಣದೇವರಂ ಏನಂ=ಈ ಬಲರಾಮನನ್ನು ಕುರಿತಂ ಅಬ್ರವೀತ್=ಹೇಳಿದರಂ. ಹೇರಾಮ=ಎಲೋ ಬಲರಾಮನೇ ಅಯಂ ಮಾಗಧಃ = ಈ ಜರಾಸಂಧನು ತ್ವಯಾ= ನಿನ್ನಿಂದ ಹಂತುಂ=ಕೊಲ್ಲಲು ನಶಕ್ಯತೇ= ಸಾಧ್ಯವಾಗುವುಲ್ಲ. ವೃಥಾ=ವ್ಯರ್ಥವಾಗಿ ತೇ=ನಿನ್ನ ಬಾಹುಬಲಂ = ಭುಜಸಾಮರ್ಥ್ಯವು ನಪ್ರಯೋಜ್ಯಂ=ಪ್ರಯೋಗಿಸಲ್ಪಡ ಬಾರದು. ತೇ=ನಿನ್ನ ಯತ್=ಯಾವ ಬಲಂ=ಸಾಮರ್ಥ್ಯವು ಅಮೋಘಂ=ವ್ಯರ್ಥವಲ್ಲದ್ದೋ ತದ್ವತ್=ಅದರಂತೆ ಅಸ್ತ್ರಂ= ಶತ್ರುಗಳನ್ನು ಸಂಹರಿಸುವ ಮುಸಲಾಯುಧವೂ ಕೂಡ ಅಮೋಘಂ=ವ್ಯರ್ಥವಲ್ಲದ್ದಂ. ಅದುದರಿಂದ ಮುಸಲವನ್ನು ವ್ಯರ್ಥವನ್ನಾಗಿ ಮಾಡಬೇಡವೆಂದು ವಾಯುದೇವರು ಹೇಳಿದರು. ॥ ೨೪ ॥

ಅನ್ಯೋಹಂತಾ ಬಲವಾನಸ್ಯಚೇತಿ ಶ್ರುತ್ವಾಯಯೌ ಬಲಭದ್ರೋ ವಿಮುಚ್ಯ ।
ಜರಾಸುತಂ ಪುನರುದ್ಯಚ್ಛಮಾನಂ ಜಘಾನ ಕೃಷ್ಣೋಗದಯಾ ಸ್ವಯೈವ ॥ ೨೫ ॥

ಅಸ್ಯ=ಈ ಜರಾಸಂಧನ ಹಂತಾ = ಸಂಹಾರಕನು ಅನ್ಯಃ=ನಿನ್ನಿಂದ ಬೇರೆಯಾದ ಬಲವಾನ್=ನಿನ್ನಿಂದಲೂ ಬಲಿಷ್ಠನು ಅಸ್ತಿ=ಇದ್ದಾನೆ. ಇತಿ=ಎಂಬುದನ್ನು ಬಲಭದ್ರಃ=ಬಲರಾಮನು ಶ್ರುತ್ವಾ=ಕೇಳಿ ವಿಮುಚ್ಯ=ಜರಾಸಂಧನನ್ನು ಬಿಟ್ಟು ಯಯೌ = ಹೋದನಂ. ಪುನಃ=ಮತ್ತೂ ಉದ್ಯಚ್ಛಮಾನಂ=ಉದ್ಯೋಗ ಮಾಡುವ ಜರಾಸುತಂ=ಜರಾಸಂಧನನ್ನು ಕೃಷ್ಣಃ=ಶ್ರೀಕೃಷ್ಣನು ಸ್ವಯಾ ಗದಯೈವ=ತನ್ನ ಗದೆಯಿಂದಲೇ ಜಘಾನ=ಹೊಡೆದನು. ಹೇಗೆ ಸಾಯಂಲಾರನೋ ಹಾಗೆ ಮೆಲ್ಲನೆ ಹೊಡೆದನಂ. ॥ ೨೫ ॥

ತೇನಾಹತಃ ಸ್ರಸ್ತಸಮಸ್ತಗಾತ್ರಃ ಪಪಾತ ಮೂರ್ಧ್ನಾಭಿಗತಃ ಸ ರಾಜಾ ।
ಚಿರಾತ ಂಜ್ಞಾಂ ಪ್ರಾಪ್ಯಚಾಂತರ್ಹಿತೋಽಸೌ ಸಂಪ್ರಾದ್ರವದ್ಭೀತಭೀತಃ ಸಲಜ್ಜಃ ॥ ೨೬ ॥

ತೇನ=ಆ ಕೃಷ್ಣನಿಂದ ಆಹತಃ=ಗದೆಯಿಂದ ತಾಡಿತನಾದ ಸ್ರಸ್ತಸಮಸ್ತಗಾತ್ರಃ=ಶಿಥಿಲಗಳಾದ ಎಲ್ಲಾ ಅವಯವಗಳುಳ್ಳ ಮೂರ್ಧ್ನಾಭಿಗತಃ=ಮೂರ್ಧೆಯನ್ನು ಹೊಂದಿದ ಸರಾಜಾ=ಆ ಜರಾಸಂಧನು ಪಪಾತ=ಬಿದ್ದನು. ಅಸೌ = ಈ ಜರಾಸಂಧನು ಚಿರಾತ್=ಬಹುಕಾಲದನಂತರ ಸಂಜ್ಞಾಂ=ಪ್ರಜ್ಞೆಯನ್ನು ಪ್ರಾಪ್ಯ=ಹೊಂದಿ ಭೀತಭೀತಃಸನ್ = ಅತಿ ಭೀತನಾಗಿ ಸಲಜ್ಜಸನ್=ನಾಚಿಕೆಯಿಂದ ಕೂಡಿದವನಾಗಿ ಅಂತರ್ಹಿತಃಸನ್=ಅಡಗಿದವನಾಗಿ ಸಂಪ್ರಾದ್ರವತ್=ಓಡಿದನಂ. ॥ ೨೬ ॥

ಯಯೌ ಶಿಷ್ಟೈಶ್ಚ ರಾಜಭಿಸ್ಸಂಯುತಶ್ಚ ಪುರಂ ಜೀವೇತ್ಯೇವಕೃಷ್ಣೇನಮುಕ್ತಃ ।
ಪುನರ್ಯುದ್ಧಂಬಹುಶಃ ಕೇಶವೇನ ಕೃತ್ವಾಜಿತೋರಾಜಗಣೈಃ ಸಮೇತಃ ॥
ಕೃಷ್ಣೇಜಿತ್ವಾಮಾಗಧಂ ರೌಹಿಣೇಯ ಯುಕ್ತೋ ಯಯೌ ದಮಘೋಷೇಣ ಸಾರ್ಧಂ ॥ ೨೭ ॥

ಕೃಷ್ಣೇನ=ಶ್ರೀಕೃಷ್ಣನಿಂದ ಜೀವ=ಬದುಕಿಕೊಂಡಿರು ಇತ್ಯೇವ=ಎಂಬುದಾಗಿಯೇ ಮುಕ್ತಃ=ಬಿಡಲ್ಪಟ್ಟ ಜರಾಸಂಧನು ಶಿಷ್ಟೈಃ=ಉಳಿದ ರಾಜಭಿಃ = ರಾಜರಿಂದ ಸಂಯುತಸ್ಸನ್=ಕೂಡಿದವನಾಗಿ ಪುರಂ=ತನ್ನ ಪಟ್ಟಣವನ್ನು ಯಯೌ= ಹೋದನು. ಪುನಃ=ಮತ್ತು ರಾಜಗಣೈಃ = ರಾಜರ ಸಮೂಹಗಳಿಂದ ಸಮೇತಸ್ಸನ್=ಕೂಡಿದವನಾಗಿ ಬಹುಶಃ=ಅನೇಕ ಸಲ ಕೃಷ್ಣೇನ=ಶ್ರೀಕೃಷ್ಣನಿಂದ ಯುದ್ಧಂ = ಯುದ್ಧವನ್ನು ಕೃತ್ವಾ=ಮಾಡಿ ಜಿತಃ=ಪರಾಜಿತನಾದನು. ಕೃಷ್ಣಃ=ಶ್ರೀಕೃಷ್ಣನು ಮಾಗಧಂ=ಜರಾಸಂಧನನ್ನು ಜಿತ್ವಾ=ಗೆದ್ದ ರೌಹಿಣೇಯ ಯುಕ್ತಸ್ಸನ್=ಬಲರಾಮನಿಂದ ಕೂಡಿದವನಾಗಿ ದಮಘೋಷೇಣ= ದಮಘೋಷನಿಂದ ಸಾರ್ಧಂ=ಕೂಡಿಕೊಂಡು ಯಯೌ=ಹೋದನು. ॥ ೨೭ ॥

ಪಿತೃಷ್ವಸಾಯಾಃ ಪತಿನಾ ತೇನ ಚೋಕ್ತಃ ಪೂರ್ವಂ ಜಿತೇನಾಪಿಯುಧಿಸ್ಮಬಾಂಧವಾತ್ ।
ಯಾಮಃ ಪುರಂ ಕರವೀರಾಖ್ಯಮೇವ ಮಹಾಲಕ್ಷ್ಮ್ಯಾಃ ಕ್ಷೇತ್ರ ಸಂದರ್ಶನಾಯ ॥ ೨೮ ॥

ಯಾಃ=ಯಾರು ಯಾರು ಸೋದರತ್ತೆಯರು ಇದ್ದಾರೋ ಅವರ ಮಧ್ಯದಲ್ಲಿ ಒಬ್ಬಳಾದ ಪಿತೃಷ್ವಸಾ=ಶಿಶುಪಾಲನ ತಾಯಿಯಾದ ಸೋದರತ್ತೆಯೋ ತಸ್ಯಾಃ=ಅವಳ ಪತಿನಾ=ಗಂಡನಾದ ಪೂರ್ವಂ=ಹಿಂದೆ ಜರಾಸಂಧನಿಂದ ಕೂಡಿಕೊಂಡು ಯುಧಿ=ಯುದ್ಧದಲ್ಲಿ ಜಿತೇನಾಪಿ=ಪರಾಜಿತನಾದ ತೇನ=ಆ ದಮಘೋಷನಿಂದ ಮಹಾಲಕ್ಷ್ಮ್ಯಾಃಕ್ಷೇತ್ರಸಂದರ್ಶನಾಯ=ಮಹಾ ಲಕ್ಷ್ಮಿಯಿಂದ ಅಧಿಷ್ಠಿತವಾದ ಕ್ಷೇತ್ರವನ್ನು ನೋಡುವುದಕ್ಕಾಗಿ ಕರವೀರಾಖ್ಯಂ=ಕರವೀರವೆಂದು ಹೆಸರುಳ್ಳ ಪುರಂ=ಪಟ್ಟಣ ವನ್ನು ಕುರಿತು ಯಾಮಃ=ಹೋಗೋಣ ಇತಿ=ಎಂದು ಬಾಂಧವಾತ್ = ಬಂಧು ಸ್ನೇಹದಿಂದ ಉಕ್ತಃ=ಹೇಳಿಸಿಕೊಳ್ಳಲ್ಪಟ್ಟ ಕೃಷ್ಣನು ಯಯೌ=ಹೋದನು. ॥ ೨೮ ॥

ಶ್ರುತ್ವಾವಾಕ್ಯಂ ತಸ್ಯಯುದ್ಧೇಜಿತಸ್ಯ ಪ್ರೀತ್ಯಾಯುಕ್ತಸ್ಯಾತ್ಮನಾ ತದ್ಯುತೋsಗಾತ್ ॥ ೨೯ ॥

ಯುದ್ಧೇ=ಸಂಗರದಲ್ಲಿ ಜಿತಸ್ಯ=ಪರಾಜಿತನಾದ ಆತ್ಮನಾ=ಸ್ವಭಾವದಿಂದ ಕಪಟವಲ್ಲದ ಪ್ರೀತ್ಯಾ=ಸ್ನೇಹದಿಂದ ಯುಕ್ತಸ್ಯ=ಕೂಡಿದ ತಸ್ಯ=ಆ ದಮಘೋಷನ ವಾಕ್ಯಂ=ಮಾತನ್ನು ಶ್ರುತ್ವಾ=ಕೇಳಿ ತದ್ಯುತಃಸನ್=ಅವನಿಂದ ಕೂಡಿದವ ನಾಗಿ ಅಗಾತ್=ಕರವೀರ ಪಟ್ಟಣಕ್ಕೆ ಶ್ರೀಕೃಷ್ಣನು ಹೋದನು. ॥ ೨೯ ॥

ಗಂಧರ್ವೋsಸೌ ದನುನಾಮಾನರೋsಭೂತ್ತಸ್ಮಾತ್ಕೃಷ್ಣೇ ಭಕ್ತಿಮಾಂಶ್ಚಾಸ ರಾಜಾ ।
ಪುರಂಪ್ರಾಪ್ತಂಸ್ವಾನ್ಯ ವಿಜ್ಞಾಯಪಾಪಃ ಸೃಗಾಲಾಖ್ಯೋವಾಸುದೇವಃ ಕ್ರುಧಾಗಾತ್ ॥ ೩೦ ॥

ಪೂರ್ವಂ = ಹಿಂದೆ ದನುನಾಮಾ=ದನುವೆಂದು ಹೆಸರುಳ್ಳ ಯಃ=ಯಾವ ಗಂಧರ್ವಃ = ಗಂಧರ್ವನೋ ಅಸೌ=ಇವನು ನರಃ=ಮನುಷ್ಯನಾಗಿ ಅಭೂತ್=ಹುಟ್ಟಿದನು. ತಸ್ಮಾತ್ = ಆದ್ದರಿಂದ ರಾಜಾ=ರಾಜನಾದ ದಮಘೋಷನು ಕೃಷ್ಣೇ= ಶ್ರೀಕೃಷ್ಣನಲ್ಲಿ ಭಕ್ತಿಮಾನ್=ಭಕ್ತಿ ಉಳ್ಳವನು ಆಸ=ಆಗಿದ್ದನು. ಪಾಪಃ=ಪಾಪಿಷ್ಠನಾದ ಸೃಗಾಲಾಖ್ಯಃ=ಸೃಗಾಲನೆಂದು ಹೆಸರುಳ್ಳ ವಾಸುದೇವಃ=ವಸುದೇವ ಪುತ್ರನಾದ ಸಃ=ಆ ಸೃಗಾಲ ವಾಸುದೇವನು ತಾನ್=ಆ ಕೃಷ್ಣಾದಿಗಳನ್ನು ಪುರಂ= ಕರವೀರ ಪಟ್ಟಣವನ್ನು ಪ್ರಾಪ್ತಾನ್=ಬಂದವರನ್ನಾಗಿ ವಿಜ್ಞಾಯ=ತಿಳಿದು ಕ್ರುಧಾ=ಕೋಪದಿಂದ ಅಗಾತ್=ಬಂದನು॥ ॥೩೦॥

ಸೂರ್ಯಪ್ರದತ್ತಂ ರಥಮಾರುಹ್ಯದಿವ್ಯಂವರಾಧವಧ್ಯಸ್ತಿಗ್ಮರುಚೇಃ ಸಕೃಷ್ಣಂ ।
ಯೋದ್ಧುಂ ಯಯಾವವಮುಚಚ್ಚಾಸ್ತ್ರಸಂಘಾನ್ ಶಿರಸ್ತಸ್ಯಾಥಾಶು ಜಹಾರ ಕೃಷ್ಣಃ ॥ ೩೧ ॥

ತಿಗ್ಮರುಚೇಃ = ತೀಕ್ಷ್ಣಗಳಾದ ಕಿರಣಗಳುಳ್ಳ ಸೂರ್ಯನ ವರಾತ್=ವರದಿಂದ ಅವಧ್ಯಃ=ನಾಶ ರಹಿತನಾದ ಸಃ=ಆ ಸೃಗಾಲ ವಾಸುದೇವನು ಸೂರ್ಯಪ್ರದತ್ತಂ=ಸೂರ್ಯನಿಂದ ಕೊಡಲ್ಪಟ್ಟ ದಿವ್ಯಂ=ಲೋಕ ವಿಲಕ್ಷಣವಾದ ರಥಂ=

ಸ್ಯಂದನವನ್ನು ಆರುಹ್ಯ=ಏರಿ ಕೃಷ್ಣಂ=ಶ್ರೀಕೃಷ್ಣನನ್ನು ಯೋದ್ಧುಂ=ಯುದ್ಧಮಾಡಲು ಯಯೌ=ಹೋದನು. ಅಸ್ತ್ರ ಸಂಘಾನ್=ಅಸ್ತ್ರಗಳ ಸಮುದಾಯಗಳನ್ನು ಅಮುಚತ್=ಬಿಟ್ಟನು. ಅಥ=ಅನಂತರ ಕೃಷ್ಣಃ=ಶ್ರೀಕೃಷ್ಣನು ತಸ್ಯ=ಆ ಸೃಗಾಲ ವಾಸುದೇವನ ಶಿರಃ=ತಲೆಯನ್ನು ಆಶು = ಕೂಡಲೇ ಜಹಾರ = ಕತ್ತರಿಸಿದನು. ॥ ೩೧ ॥

ದ್ವಿಧಾಕೃತ್ವಾದೇಹಮಸ್ಯಾರಿಣಾಚ ಪುತ್ರಂ ಭಕ್ತಂ ತಸ್ಯರಾಜ್ಯೇಽಭಿಷಿಚ್ಯಂ ।
ಸಶಕ್ರದೇವಂ ಮಣಿಭದ್ರಃ ಪುರಾಯೋ ಯಯೌ ಪುರೀಂ ಸ್ವಾಂ ಸಹಿಗೋಽಗ್ರಜೇನ ॥ ೩೨ ॥

ಸಃ=ಆ ಶ್ರೀಕೃಷ್ಣನು ಅಸ್ಯ=ಈ ಸೃಗಾಲ ವಾಸುದೇವನ ದೇಹಂ=ಶರೀರವನ್ನು ಅರಿಣಾ=ಚಕ್ರದಿಂದ ದ್ವಿಧಾ= ಎರಡು ಭಾಗವಾಗಿ ಕೃತ್ವಾ=ಮಾಡಿ ಪುರಾ=ಹಿಂದೆ ಮೂಲರೂಪದಲ್ಲಿ ಯಃ=ಯಾವ ಮಣಿಭದ್ರಃ=ಮಣಿಭದ್ರನೆಂಬ ದೇವೋಽಭೂತ್=ದೇವತೆ ಇದ್ದನೋ ತಸ್ಯ=ಆ ಸೃಗಾಲ ವಾಸುದೇವನ ಪುತ್ರಂ=ಮಗನಾದ ಭಕ್ತಂ=ತನ್ನ ಭಕ್ತನಾದ ಶಕ್ರದೇವಂ=ಶಕ್ರದೇವ ನಾಮಕನನ್ನು ರಾಜ್ಯೇ=ರಾಜ್ಯದಲ್ಲಿ ಅಭಿಷಿಚ್ಯ=ಪಟ್ಟಾಭಿಷೇಕ ಮಾಡಿ ಅಗ್ರಜೇನ = ಅಣ್ಣನಿಂದ ಸಹಿತಃಸನ್ = ಕೂಡಿದವನಾಗಿ ಸ್ವಾಂಪುರೀಂ = ತನ್ನ ಮಧುರಾ ಪಟ್ಟಣವನ್ನು ಕುರಿತು ಯಯೌ = ಹೋದನು. ॥ ೩೨ ॥

ಅವ:- ಸಂದರ್ಶಯನ್ ಬಲಿನಾಂ ನೀತಿಮಗ್ರ್ಯಾಂ ಎಂಬುದಾಗಿ ಉಪಕ್ರಮ ಮಾಡಿದ ಅರ್ಥವನ್ನು ಉಪ ಸಂಹಾರ ಮಾಡುತ್ತಾರೆ,

ನೀತಿಂ ಬಲಿಷ್ಠಸ್ಯ ವಿಹಾಯ ಸೇನಾಂ ದೂರಾದ್ಯುದ್ಧಂದರ್ಶಯಿತ್ವೈವಗುಪ್ತ್ಯೈ ।
ಸ್ವಸೇನಾಯಾಃ ಸರ್ವಪೂರ್ಣಾತ್ಮ ಶಕ್ತಿಃ ಪುನಃಪುರೀಂ ಪ್ರಾಪ್ಯ ಸಂಪೂಜಿತೋಽವಸತ್ ॥ ೩೩ ॥

ಸರ್ವಪೂರ್ಣಾತ್ಮಶಕ್ತಿಃ = ಎಲ್ಲಾ ವಿಷಯದಲ್ಲಿಯೂ ಪರಿಪೂರ್ಣವಾದ ಸ್ವರೂಪ ಸಾಮರ್ಥ್ಯವುಳ್ಳ ಶ್ರೀಕೃಷ್ಣನು ಸ್ವಸೇನಾಯಾಃ = ತಮ್ಮ ಸೈನ್ಯದ ಗುಪ್ತ್ಯೈ = ರಕ್ಷಣೆಗೋಸ್ಕರ ಬಲಿಷ್ಠಸ್ಯ = ಬಲಿಷ್ಠನಾದವನಿಗೆ ಸೇನಾಂ = ತನ್ನ ಸೇನೆಯನ್ನು ವಿಹಾಯ = ಬಿಟ್ಟು ದೂರಾದ್ದೂರಂಪ್ರಾಪ್ಯ = ಬಹು ದೂರ ಪ್ರದೇಶವನ್ನು ಹೊಂದಿಯುದ್ಧಂಕಾರ್ಯಂ= ಯುದ್ಧವನ್ನು ಮಾಡತಕ್ಕದ್ದು ಇತಿ= ಎಂಬ ನೀತಿಂ =ನೀತಿಯನ್ನು ದರ್ಶಯಿತ್ವೈವ = ತೋರಿಸಿಯೇ ಪುನಃ = ಮತ್ತು ಪುರೀಂ = ಪಟ್ಟಣವನ್ನು ಪ್ರಾಪ್ಯ = ಹೊಂದಿ ಸಂಪೂಜಿತಸ್ಸನ್ = ಪೂಜಿಸಿಕೊಳ್ಳಲ್ಪಟ್ಟವನಾಗಿ ಅವಸತ್ = ವಾಸ ಮಾಡಿದನು. ॥

ಬಲಿಷ್ಠನಾದ ಶತ್ರುವು ಯುದ್ಧಕ್ಕೆ ಬರುವಾಗ ತನ್ನ ಸೈನ್ಯವನ್ನು ಬಿಟ್ಟು ತಾನು ದೂರಕ್ಕೆ ಹೋದಾಗ ಶತ್ರುವೂ ತನ್ನ ಸೇನೆಯಿಂದ ಕೂಡಿಕೊಂಡು ತನ್ನನ್ನು ಅನುಸರಿಸಿ ಬರುವನು. ಆಗ ತನ್ನ ಸೈನ್ಯದ ರಕ್ಷಣೆಯಾಗುವುದು ಎಂಬ ಅಭಿಪ್ರಾಯವು ॥ ೩೩ ॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ
ಶ್ರೀಕೃಷ್ಣಚರಿತೇ ಜರಾಸಂಧಾದಿ ಭಂಗೋ ನಾಮ
ಷೋಡಶೋಽಧ್ಯಾಯಃ

॥ ಶ್ರೀಕೃಷ್ಣಾರ್ಪಣಮಸ್ತು ॥

ಈ ರೀತಿಯಾಗಿ ಆನಂದತೀರ್ಥರಿಂದ ಮಾಡಲ್ಪಟ್ಟ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದ ಕೃಷ್ಣ ಚರಿತ್ರೆಯಲ್ಲಿ ಜರಾಸಂಧಾದಿಗಳ ಪರಾಜಯವನ್ನು ಪ್ರತಿಪಾದಿಸುವ ಹದಿನಾರನೆಯ ಅಧ್ಯಾಯವು ಸಮಾಪ್ತವಾಯಿತು. ಈ ಕೃತಿಯು ಹರಿ ವಾಯುಗಳಿಗೆ ಅರ್ಪಿತವಾಗಲಿ. ಶುಭಂ.